# ‘ವಾಸ್ತವಿಕ ಪೌರಾಣಿಕ ಕಥೆ ಬೇಕು

**ಅಕ್ಷತಾ ರಾಧಾಕೃಷ್ಣ**
**ಉದಯದ ‘ನಾತಿಚರಾಮಿ’ಯ ರಾಜೇಶ್ವರಿ**

◆ **ನಟನೆಯನ್ನು ಆರಂಭಿಸಿದ್ದು ಹೇಗೆ?**

ಕಾಲೇಜು ದಿನಗಳಲ್ಲಿಯೇ ರಂಗಚಟುವಟಿಕೆಯಲ್ಲಿ ತೊಡಗಿದೆ. ಅದಕ್ಕೆ ಇನ್ನೂ ಸ್ಪಷ್ಟ ರೂಪ ಬಂದಿದ್ದು, ನಮ್ಮ ಕಾಲೇಜಿನಲ್ಲಿ ಆಯೋಜಿಸಿದ್ದ ರಂಗ ಶಿಬಿರ. ಅದರಲ್ಲಿ ಸಕ್ರಿಯಳಾಗಿ ಭಾಗವಹಿಸಿದ್ದೆ. ಅಲ್ಲಿ ಗಾಯನ, ನೃತ್ಯ ಮತ್ತು ನಟನೆಯನ್ನು ಹೇಳಿಕೊಟ್ಟರು. ಆ ರೀತಿಯ ಕಾರ್ಯಾಗಾರ ಪ್ರತಿವರ್ಷ ನಡೆಯುತ್ತಿತ್ತು. ಅದು ನನ್ನಲ್ಲಿ ಇನ್ನೂ ಆಸಕ್ತಿಯನ್ನು ಹುಟ್ಟಿಸಿತು. ಅದನ್ನೇ ಮುಂದುವರಿಸುತ್ತಾ ಬಂದಿದ್ದೇನೆ ಅಷ್ಟೇ.

◆ **ಆಡಿಷನ್ ಮತ್ತು ಕ್ಯಾಮೆರಾ ಎದುರಿಸಿದ ಮೊದಲ ದಿನಗಳು ಹೇಗಿದ್ದವು?**

ಸುಮಾರು ಆಡಿಷನ್ ಕೊಟ್ಟಿದ್ದೆ. ಯಾವುದರಲ್ಲೂ ಆಯ್ಕೆ ಆಗಿರಲಿಲ್ಲ. ನಾನೊಂದು ನಾಟಕದಲ್ಲಿ ಕೆಲಸ ಮಾಡಿದ್ದೆ. ಪ್ರದರ್ಶನದ ಹಿಂದಿನ ದಿನದ ತಾಲೀಮನ್ನು ನೋಡಲು ಬಂದಿದ್ದ ನಿರ್ದೇಶಕ ವಿನೋದ್ ವಿ ದೋಂಡಾಲೆ ಅವರು ಸೀರಿಯಲ್ ಆಡಿಷನ್ನಿಗೆ ಆಹ್ವಾನಿಸಿದರು. ಕಲರ್ಸ್ ಕನ್ನಡದ ‘ನನ್ನರಸಿ ರಾಧೆ’ಯನ್ನು ನಿರ್ದೇಶನ ಮಾಡುತ್ತಿದ್ದರು. ಅದರಲ್ಲಿ ನನಗೆ ನೆಗೆಟಿವ್ ಪಾತ್ರ ಸಿಕ್ಕಿತು. ಅದುವೇ ನನ್ನ ಮೊದಲ ಧಾರಾವಾಹಿ. ಸೀರಿಯಲ್‌ಗೆ ಹೋಲಿಸಿದರೆ ರಂಗಭೂಮಿಯ ತಂತ್ರಗಾರಿಕೆಯೇ ಬೇರೆ. ಧಾರಾವಾಹಿಗೆ ಕ್ಯಾಮೆರಾ ಎದುರಿಸುವಾಗ ಅದರ ಮೂಲತತ್ವ ಗೊತ್ತಿರಲಿಲ್ಲ. ಅದೆಲ್ಲ ಹೊಸತು. ಏನೂ ಗೊತ್ತಿರದ ನನಗೆ ಸಮಾಧಾನವಾಗಿ ಅವರೇ ಹೇಳಿಕೊಟ್ಟರು. ನಾಟಕಗಳಿಗಿಂತ ಸರಳವಾಗಿ ಅಭಿನಯವನ್ನು ಮಾಡಿದರೆ ಸಾಕು ಎನ್ನುವುದನ್ನು ನಿಧಾನಕ್ಕೆ ಕಲಿತೆ.

◆ **ರಾಜೇಶ್ವರಿ ಪಾತ್ರದ ಬಗ್ಗೆ ಏನು ಹೇಳುತ್ತೀರಿ?**

ಎಲ್ಲ ರಾಜಿ ಎಂದೇ ಕರೆಯುತ್ತಾರೆ. ಸೀರಿಯಲ್‌ನಲ್ಲಿ ಇದೇ ಮೊದಲ ಬಾರಿಗೆ ಪಾಸಿಟಿವ್ ಪಾತ್ರವನ್ನು ಮಾಡುತ್ತಿದ್ದೇನೆ. ಐದು ಧಾರಾವಾಹಿಗಳಲ್ಲಿಯೂ ಋಣಾತ್ಮಕ ಗುಣದ ಪಾತ್ರಗಳನ್ನೇ ಮಾಡಿದ್ದೆ. ಇಂತಹ ಪಾತ್ರ ಎಂದು ಗೊತ್ತಾದ ತಕ್ಷಣವೇ ಹೊಸ ಬಗೆಯದ್ದೆಂದು ಖುಷಿಯಾಯಿತು. ಪಾತ್ರದ ನಿರ್ವಹಣೆಯೂ ಖುಷಿ ಕೊಡುತ್ತಿದೆ. ಸಾಮಾನ್ಯವಾಗಿ ನಾನು ಯಾವುದೇ ಪಾತ್ರವನ್ನು ಆಯ್ಕೆ ಮಾಡಿಕೊಳ್ಳುವಾಗ ಎರಡು ಅಂಶಗಳು ನನಗೆ ಮುಖ್ಯ. ಅದರಿಂದ ಏನಾದರೂ ಹೊಸದನ್ನು ಕಲಿಯಲು ಸಾಧ್ಯವೇ, ನನ್ನ ತಿಳಿವಳಿಕೆಯನ್ನು ಆ ಪಾತ್ರದ ಮೂಲಕ ಪ್ರಯೋಗಿಸಲು ಸಾಧ್ಯವೇ ಎಂದು ಆಲೋಚಿಸುತ್ತೇನೆ. ಅದರ ಆಧಾರದ ಮೇಲೆ ಪಾತ್ರವನ್ನು ನೋಡುವುದು ನನ್ನ ಪಾಲಿಸಿ. ಈ ಹಿಂದೆ ಮಾಡಿರುವ ಪಾತ್ರಕ್ಕಿಂತ ಪಾತ್ರ ಭಿನ್ನವಾಗಿದೆಯಾ? ಸೃಜನಶೀಲವಾಗಿ ಏನು ಮಾಡಲು ಸಾಧ್ಯ ಎನ್ನುವುದು ನನಗೆ ಬಹುಮುಖ್ಯ ಆಗುತ್ತದೆ. ಏಕೆಂದರೆ, ಕಲಿಯಲು ಅವಕಾಶ ಇರಬೇಕು ಎನ್ನುವುದು ನನ್ನ ಪ್ರಮುಖ ಮಾನದಂಡ.



◆ **ನಿಮ್ಮ ಅನುಭವದಲ್ಲಿ ಹೇಳುವುದಾದರೆ, ಈ ಐದು ವರ್ಷದಲ್ಲಿ ಬದಲಾವಣೆ ಏನಾಗಿದೆ?**

ಸಾಮಾನ್ಯವಾಗಿ ಕಥೆಗಳು ಮೊದಲಿನಂತೆ ಇವೆ. ಅವನ್ನು ಪ್ರೆಸೆಂಟ್ ಮಾಡುವ ರೀತಿಯಲ್ಲಿ ಒಂದಿಷ್ಟು ಬದಲಾವಣೆ ಕಾಣುತ್ತಿದೆ. ಅದ್ದೂರಿತನ ಹೆಚ್ಚಾಗುತ್ತಿದೆ. ಸಾಧಾರಣವಾಗಿ ನಿತ್ಯ ಬದುಕಿನ ಘಟನೆಗಳನ್ನೇ ಆಧರಿಸಿ ಕಥೆಯನ್ನು ಮಾಡುತ್ತಾರೆ. ಒಬ್ಬೊಬ್ಬರು ನೋಡುವ ದೃಷ್ಟಿ ಭಿನ್ನ ಇರುವುದರಿಂದ ಕಥೆಯೂ ಭಿನ್ನ ಅನ್ನಿಸುತ್ತದೆ. ತಾಂತ್ರಿಕವಾಗಿಯೂ ಬದಲಾವಣೆ ಆಗಿದೆ.

◆ **ಈಗ ರಂಗ ಚಟುವಟಿಕೆಯಲ್ಲಿ ಹೇಗೆ ತೊಡಗುತ್ತಿದ್ದೀರಿ?**

ನಿರಂತರವಾಗಿ ರಂಗಭೂಮಿ ಕೆಲಸವನ್ನು ಮಾಡುತ್ತಲೇ ಬಂದಿದ್ದೇನೆ. ಈ ಹಿಂದೆ ಹಲವು ರಂಗ ತಂಡಗಳಲ್ಲಿ ಕೆಲಸ ಮಾಡಿದ್ದೇನೆ. ಅವುಗಳ ಸಂಪರ್ಕ ಈಗಲೂ ಇದೆ. ಇವತ್ತಿನ ನನ್ನ ಬೆಳವಣಿಗೆಗೆ ರಂಗಭೂಮಿಯೇ ಕಾರಣ. ನಾನು ನಡೆದು ಬಂದ ಹಾದಿಯನ್ನು ಮರೆಯಲು ಸಾಧ್ಯವೂ ಇಲ್ಲ. ರಂಗ ಪ್ರದರ್ಶನದಲ್ಲಿ ತೊಡಗಲು ಸಾಧ್ಯ ಆಗದಿದ್ದರೂ ಮಕ್ಕಳಿಗೆ ಹೇಳಿಕೊಡುತ್ತೇನೆ. ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸುತ್ತೇನೆ. ಅವರಿಗೆ ನಾಟಕಗಳನ್ನು ಕಲಿಸುತ್ತೇನೆ. ‘ಸಮನ್ವಿಕಾ’ ಎಂಬ ತಂಡವನ್ನು ನಾವೇ ಗೆಳೆಯರು ಸೇರಿ ಮಾಡಿದ್ದೇವೆ.

◆ **ಮುಂದಿನ ಕನಸಿನ ಬಗ್ಗೆ ಏನು ಹೇಳುತ್ತೀರಿ?**

ಪಾತ್ರಗಳೇ ನನ್ನ ಕನಸು. ಮಾನಸಿಕ, ದೈಹಿಕ ಸಮಸ್ಯೆ ಇರುವ ಪಾತ್ರಗಳನ್ನು ಮಾಡಬೇಕು. ಮೂಗಿ–ಕುರುಡಿ ಇಲ್ಲವೇ ಮೆಂಟಲ್ ಡಿಸಾರ್ಡರ್ ಇರುವ ವ್ಯಕ್ತಿತ್ವವನ್ನು ನಿರ್ವಹಿಸಬೇಕು. ಇಂತಹ ಭಿನ್ನ ಪಾತ್ರಗಳು ತೀರ ಕಡಿಮೆ ಆಗಿವೆ. ವೀಕ್ಷಕರು ಇಂತಹ ಕಥೆಯನ್ನು ಇಷ್ಟ ಪಡುತ್ತಾರೆ. ಒಂದು ಕೌಟುಂಬಿಕ ಕಥೆಯಲ್ಲಿ ನೆಗೆಟಿವ್ ಪಾಸಿಟಿವ್ ಕಥೆ ಬರುವುದು ಸಾಮಾನ್ಯವಾಗಿದೆ. ಆದರೆ ಅದೆಲ್ಲದಕ್ಕಿಂತ ಮಕ್ಕಳ ಜೊತೆ ಕುಳಿತು ಸೀರಿಯಲ್ ನೋಡಬೇಕು ಎನ್ನುವ ಅಪೇಕ್ಷೆ ಇದೆ. ನಮ್ಮ ಪರಂಪರೆಯನ್ನು ದೃಶ್ಯದ ಮೂಲಕ ಮಕ್ಕಳಿಗೆ ದಾಟಿಸಬೇಕಿದೆ. ಆ ಹಿನ್ನೆಲೆಯಲ್ಲಿ ವಾಸ್ತವಕ್ಕೆ ಹತ್ತಿರವಾಗುವಂತೆ ಪೌರಾಣಿಕ ಮತ್ತು ಐತಿಹಾಸಿಕ ಕಥೆಗಳನ್ನು ಮಾಡಬೇಕು ಇಂತಹ ಕಥೆಗಳು ಬಂದರೆ ಚೆನ್ನಾಗಿರುತ್ತೆ.

■ **ರಾಘವೇಂದ್ರ ಕೆ.**